'ನಟ ಸಾರ್ವಭೌಮ', 'ಕನ್ನಡದ ವರನಟ', 'ಕನ್ನಡಿಗರ ಕಣ್ಮಣಿ', 'ಸೂಪರ್ ಸ್ಟಾರ್', 'ಮೆಗಾ ಸ್ಟಾರ್' ಅಭಿಮಾನಿ ರಸಿಕರು ಹರಿಸಿರುವ ಹೊಗಳಿಕೆಯ ಮಹಾಪೂರವನ್ನು ವಿನಮ್ರತೆಯಿಂದ ಸ್ವೀಕರಿಸಿ, ನಾಡಿನ ಜನಸ್ತೋಮದ ಹೃದಯದಲ್ಲಿ ಶಾಶ್ವತವಾಗಿ ನೆಲೆಯೂರಿರುವ ಅಪ್ರತಿಮ ನಾಯಕ, ಕನ್ನಡ ಚಿತ್ರರಂಗದ ಧವಳಗಿರಿಯ ತುತ್ತ ತುದಿಯನ್ನೇರಿದ ಮಹಾನ್ ಕಲಾವಿದ ಯಾರು ಎಂಬುದನ್ನು ಊಹಿಸುವ ಅಗತ್ಯವೇ ಇಲ್ಲ, ಅಲ್ಲವೇ?

ಬಿರುದುಗಳ ಬಾಸಿಂಗವನ್ನು ಮೆರೆಯಿಸುತ್ತ ಬೆಳ್ಳಿ ತೆರೆಯ ಮೇಲೆ ಹತ್ತು, ಇಪ್ಪತ್ತು, ಮೂವತ್ತು ಹೀಗೆ ಎಣಿಕೆಗೆ ಮೀರುವಷ್ಟು ನಾಯಕಿರೊಂದಿಗೆ ಹಾಡಿ, ನರ್ತಿಸಿ, ಸಂಭಾಷಿಸಿ ಕಿಕ್ಕಿರಿದು ತುಂಬಿದ ಪ್ರೇಕ್ಷಕರನ್ನು ಖುಷಿಪಡಿಸುವ, ಅವರ ಮೈ ಜುಮ್ಮೆನ್ನಿಸಿ ತನ್ನ ಅಪ್ರತಿಮ ಕಲಾವಂತಿಕೆಯ ಮೂಲಕ ಅವರನ್ನು ಮೂಕ ವಿಸ್ಮಿತರನ್ನಾಗಿಸುವ ಈ 'ಕರ್ನಾಟಕ ರತ್ನ' ಬೆಳ್ಳಿ ತೆರೆಯ ವಹಿವಾಟುಗಳನ್ನು ಬದಿಗಿಟ್ಟು ಬಣ್ಣ ಕಳಚಿ ನಿಜ ಜೀವನಕ್ಕೆ ಮರಳಿದಾಗ ಮನೆಯೊಳಗೆ ಇವರ ಕಾಯಂ ಹಿರೋಯಿನ್ ಪಟ್ಟಕ್ಕೆ ಬಾಧ್ಯಸ್ಥರು ಒಬ್ಬರೇ ಒಬ್ಬರು, ಅವರು ಪಾರ್ವತಮ್ಮ ರಾಜಕುಮಾರ. ಅವರ ಜೀವನ ದೋಣಿಗೆ ಚುಕ್ಕಾಣಿಯಾಗಿ ಸುಮಾರು ನಲವತ್ತು ವರ್ಷಗಳ ಕಾಲ ಅವರ ಬಾಳನ್ನು ಉಬ್ಬರವಿಳಿತಗಳೆರಡರಲ್ಲೂ ಮುನ್ನಡೆಸಿರುವ ಸಮರ್ಥ ಮಹಿಳೆ. ವಿದ್ಯಾವಂತರನ್ನೂ ನಾಚಿಸುವಷ್ಟು ಕುಶಾಗ್ರಮತಿಯಾಗಿ ಇಂದು ಕರ್ನಾಟಕ ಚಿತ್ರೋದ್ಯಮದಲ್ಲೇ ಪ್ರಮುಖವೆನಿಸಿರುವ ನಿರ್ಮಾಣ ವಿತರಣೆ ಸಂಸ್ಥೆಯೊಂದನ್ನು ಚಾಣಾಕ್ಷತೆಯಿಂದ ನಿರ್ವಹಿಸುತ್ತಿರುವ ಮಹಿಳೆ. ಯಾವುದೇ ಭಾಷೆಯ, ಯಾವುದೇ ನಟನ ಪತ್ನಿಯೂ ಪ್ರಾಯಶಃ ಪಾರ್ವತಮ್ಮನವರಂತೆ ತಮ್ಮ ಪತಿಯ ವ್ಯವಹಾರಗಳಲ್ಲಿ ತಮ್ಮನ್ನೇ ತೊಡಗಿಸಿಕೊಂಡಿರಲಾರರು. ಪತಿಪತ್ನಿ ಪರಸ್ಪರರಿಗೆ ಪ್ರೇಮ ವಿಶ್ವಾಸವನ್ನು ತೋರುವಂತೆಯೇ ಪರಸ್ಪರರ ಉದ್ಯಮಗಳಲ್ಲಿ ಒಬ್ಬರೊಬ್ಬರಿಗೆ ನೆರವಾಗಬೇಕು ಎಂಬ ಧ್ಯೇಯವನ್ನು ಇವರಂತೆ ಅಳವಡಿಸಿಕೊಂಡಿರಲಾರರು.

ಪಾರ್ವತಮ್ಮನವರಷ್ಟು ನಿಕಟವಾಗಿ ಮಹಾನ್ ನಟ ರಾಜಕುಮಾರ ಅವರನ್ನು ಕಂಡವರು ಮತ್ತ್ಯಾರಿರಲು ಸಾಧ್ಯ? ಪತ್ನಿ ಪಾರ್ವತಮ್ಮ ಪತಿ ರಾಜಕುಮಾರ ಅವರೊಂದಿಗೆ ತಾವು ಕಳೆದ ಅವಿಸ್ಮರಣೀಯ ಬಾಳ್ವೆಯನ್ನು ಮೆಲುಕು ಹಾಕುವಾಗ ಕನ್ನಡದ ಈ ಕುಲಪುತ್ರನನ್ನು ತನ್ನವನ್ನಾಗಿಸಿಕೊಂಡ ಅಭಿಮಾನ ಆಕೆಯ ಮುಖದಲ್ಲಿ ಸೂಸುತ್ತದೆ. ಮಾತು ಮೃದುವಾಗಿ ಪ್ರತಿ ಶಬ್ದಕ್ಕೂ ಸವಿಯ ಲೇಪನವಾಗುತ್ತದೆ. ಪಾರ್ವತಮ್ಮ 'ಎಲ್ಲರಂಥವನಲ್ಲದ ತನ್ನ ಗಂಡ'ನ ಬಗ್ಗೆ ಮಾತನಾಡತೊಡಗುತ್ತಾರೆ.

★★★

ನನ್ನ ಯಜಮಾನರಿಗೂ ನನಗೂ ಮದುವೆ ನಿಷ್ಕರ್ಷೆ ತೊಟ್ಟಿಲಲ್ಲೇ ನಡೆದಿತ್ತು ಅನ್ನಬಹುದು. ನನ್ನಪ್ಪ ಅಮ್ಮನಿಗೆ ನಾಲ್ಕು ಹೆಣ್ಣು, ನಾಲ್ಕು ಗಂಡು ಮಕ್ಕಳು. ನಾನು ಹುಟ್ಟಿದ್ದು ನಂಜನಗೂಡಿನಲ್ಲಿ. ಹುಟ್ಟುತ್ತಿದ್ದ ಹಾಗೇ, ನನ್ನ ಮಾವ, ಅಂದರೆ 'ಅಣ್ಣಾವರ' ತಂದೆ ಪುಟ್ಟಸ್ವಾಮಯ್ಯನವರು ತಮ್ಮ ಮಗನಿಗೆ ನನ್ನನ್ನೇ ತಂದುಕೊಳ್ಳೋದು ಅಂತ ನಿಶ್ಚಯ ಮಾಡಿಬಿಟ್ಟಿದ್ದರಂತೆ. ನಮ್ಮ ಕುಟುಂಬಕ್ಕೂ ನನ್ನ ಯಜಮಾನರ ಮನೆತನಕ್ಕೂ ಮೊದಲಿನಿಂದಲೂ ಗಳಸ್ಯ ಕಂಠಸ್ಯ. ಒಂದು ರೀತಿ ಸಂಬಂಧಿಕರೂ ಕೂಡ. ನನ್ನ ತಾತನ ಅಕ್ಕನ ಮಗನೇ ನನ್ನ ಮಾವನವರು. ಅದೂ ಅಲ್ಲದೆ ನನ್ನ ತಂದೆ ಅಪ್ಪಾಜಿಗೌಡರು ಸ್ಕೂಲಲ್ಲಿ ಸಂಗೀತದ ಮೇಷ್ಟ್ರಾಗಿದ್ದರಿಂದ ನನ್ನ ಯಜಮಾನರು ಅವರ ಹತ್ತಿರವೇ ಸಂಗೀತ ಪಾಠ ಹೇಳಿಸಿಕೋತಾ ಇದ್ದರು. ನನ್ನ ತಾತ ನಾಟಕಗಳಲ್ಲಿ ಯಾವಾಗಲೂ ಭರ್ಜರಿ ಪಾರ್ಟ್ ಮಾಡ್ತಾ ಇದ್ದರು. ಅದರಲ್ಲೂ ರಾಕ್ಷಸರ ಪಾತ್ರ ಅವರಿಗೇ ಕಟ್ಟಿಟ್ಟದ್ದಂತೆ. ಆಗೆಲ್ಲ ಇದ್ದದ್ದೇ ಗುಬ್ಬಿ ಕಂಪನಿ, ನೀಲಕಂಠಪ್ಪ ಕಂಪನಿ, ಶೇಷಾಚಾರ್ ಕಂಪನಿ ಮುಂತಾದವು. ನನ್ನ ಯಜಮಾನರು ಇನ್ನೂ ಪುಟ್ಟ ಹುಡುಗನಿರುವಾಗಲೇ ಅವರನ್ನು ತಾತ